ತ್ವರಿತಗೊಳಿಸಬೇಕೆಂಬ ಉದ್ದೇಶದಿಂದ ಖಾಸಗಿ ಕನ್‌ಸಲ್ಟೆಂಟ್ಸ್‌ಗೆ ಹೇಗೆ ನಿರ್ವಹಿಸಿದ್ದೆವೋ ಅದೇ ರೀತಿ ನಮ್ಮ ಅಧಿಕಾರಿಗಳ ಜೊತೆ ಚರ್ಚಿಸಿ ಈ ಕೆಲಸವನ್ನೂ ಖಾಸಗಿಯವರಿಗೆ ಕೊಡುವ ಬಗ್ಗೆ ನಾವು ಪರಿಶೀಲಿಸುತ್ತೇವೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :- ನಿಗಮದಲ್ಲಿ ಯಾವುದು ಐಡ್ಲ ಸಬ್ ಡಿವಿಜನ್ ಇದೆಯೋ ಅದರ ಕಡೆಯಿಂದ ಮಾಡಿಸುತ್ತೇನೆ ಎಂದಿದ್ದಿರಿ, ಅದೇ ಪ್ರಕಾರ ನಾವು ಪ್ರಯತ್ನಿಸಿದೆವು. ಆದರೆ ಅವರಿಗೆ ಎಷ್ಟು ಐಡ್ಲ ಸಬ್ ಡಿವಿಜನ್ಸ್ ಇವೆ ಎಂದು ಐಡೆಂಟಿಫೈ ಕೂಡ ಮಾಡಿ ಕೊಟ್ಟೆವು. ನಿಪ್ಪಾಣಿ ಸಬ್ ಡಿವಿಜನ್ ಐಡ್ಲ ಆಗಿ ಒಂದೂವರೆ ವರ್ಷವಾಗಿದೆ.

ಶ್ರೀ ಎಚ್.ಕೆ ಪಾಟೀಲ್ :- ಹೆಚ್ಚುವರಿ ಸಬ್ ಡಿವಿಜನ್ ಅನ್ನು ವರ್ಗಾಯಿಸುವ ನಿರ್ಣಯವನ್ನು ನಾವು ಎರಡು ಮೂರು ತಿಂಗಳ ಹಿಂದೆ ತೆಗೆದುಕೊಂಡಿದ್ದೇವೆ. ಆದ್ದರಿಂದ ಯಾವುದೋ ಸಬ್ ಡಿವಿಜನ್‌ಗೆ ನಾವು ಇದನ್ನು ಒಪ್ಪಿಸುವುದಿಲ್ಲ. Sub - divisions will be transferred only for this work.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :- ಈ ಇಲಾಖೆಗೆ ವಿಲ್ಲೇ ಇಲ್ಲ, ಬರೀ ಸಬ್ ಡಿವಿಜನ್‌ಗೆ ಒಪ್ಪಿಸುವ ಪತ್ರ ವ್ಯವಹಾರಕ್ಕೇ ಒಂದೂವರೆ ವರ್ಷ ಮಾಡಿದರು, ನಿಮಗೆ ವಿಶ್ವಾಸ ಇದ್ದರೆ ಅವರ ಕೈಯಲ್ಲೇ ಮಾಡಿಸಿ, ಇಲ್ಲದಿದ್ದರೆ ಪ್ರೈವೇಟ್‌ನವರಿಗೆ ಕೊಡಿರಿ. ಈ ಬಗ್ಗೆ ಒಂದು ಕಾಲಮಿತಿ ಹೇಳಿ. ಈಗಾಗಲೇ ಇದರದು ಲೈನ್ ಎಸ್ಟಿಮೇಟ್ ಆಗಿದೆ. ಡಿಟೈಲ್ಡ್ ಸರ್ವೆ ಮಾಡಲು ಅಬ್ಬಾ ಎಂದರೂ ಮೂರು ತಿಂಗಳು ಸಾಕು. ಅದು ಬೇಡ ಅಂದರೆ 6 ತಿಂಗಳಲ್ಲಾದರೂ ಮಾಡಿಸಿ.

ಶ್ರೀ ಎಚ್.ಕೆ. ಪಾಟೀಲ್ :- ಒಟ್ಟಿನಲ್ಲಿ ನಾನು ಇಷ್ಟು ಹೇಳಬಹುದು, ನಾನು ಈ ವಿಚಾರವನ್ನು ಚರ್ಚೆ ಮಾಡುತ್ತೇನೆ. 15 ತಿಂಗಳಲ್ಲಿ ಸಂಪೂರ್ಣ ಪ್ರಾಜೆಕ್ಟ್ ರಿಪೋರ್ಟ್‌ನ್ನು ನಾನು ರೆಡಿ ಮಾಡಿಸುತ್ತೇನೆ.

ವಿಶ್ವೇಶ್ವರಯ್ಯ ನಾಲಾ ಆಧುನೀಕರಣದ ಕಾಮಗಾರಿ

395 (3590) ಶ್ರೀ ಎಂ.ಎಸ್.ಆತ್ಮಾನಂದ (ಮಂಡ್ಯ) :- ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಶ್ವೇಶ್ವರಯ್ಯ ನಾಲಾ ಆಧುನೀಕರಣ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ವಿಶ್ವೇಶ್ವರಯ್ಯ ನಾಲಾ ಆಧುನೀಕರಣ ಕಾಮಗಾರಿಗೆ ಈವರೆಗೆ ಸರ್ಕಾರ ಖರ್ಚು ಮಾಡಿರುವ ಹಣದ ಮಾತ್ತವೆಷ್ಟು;

ಇ) ಸಂಪರ್ಕ ನಾಲೆಯ ಸುರಂಗ ನಿರ್ಮಾಣದ ಕಾರ್ಯ ಯಾವ ಹಂತದಲ್ಲಿದೆ;

ಈ) ಈ ವರೆವಿಗೂ ಸುರಂಗ ನಿರ್ಮಾಣಕ್ಕೆ ವೆಚ್ಚ ಮಾಡಿರುವ ಹಣವೆಷ್ಟು?

ಶ್ರೀ ಎಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :-

ಅ) ವಿಶ್ವೇಶ್ವರಯ್ಯ ನಾಲಾ ಆಧುನೀಕರಣದ ಕಾಮಗಾರಿಯಲ್ಲಿ ಟೆಂಡರ್ ಮುಖಾಂತರ ವಹಿಸಿರುವ ಕಾಮಗಾರಿಗಳು ಪ್ರಗತಿಯಲ್ಲಿದ್ದು, ತುಂಡು ಗುತ್ತಿಗೆ ಮುಖಾಂತರ ವಹಿಸಲಾಗಿದ್ದ ಕಾಮಗಾರಿಗಳು ಮಾತ್ರ ಸ್ಥಗಿತಗೊಂಡಿರುತ್ತವೆ. ತುಂಡು ಗುತ್ತಿಗೆಗಿ ನೀಡಲಾಗಿರುವ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ಕೈಗೊಳ್ಳಲು ಸೂಚಿಸಲಾಗಿದೆ.

ಆ) ವಿಶ್ವೇಶ್ವರಯ್ಯ ನಾಲಾ ಆಧುನೀಕರಣದ ಕಾಮಗಾರಿಗೆ 9/2000 ವರೆಗೆ ರೂ. 254. 17 ಕೋಟಿ ಖರ್ಚಾಗಿರುತ್ತದೆ.

ಇ) ಸಂಪರ್ಕ ನಾಲೆ ಸುರಂಗ ನಿರ್ಮಾಣದ ಕಾರ್ಯವು ಮುಕ್ತಾಯ ಹಂತದಲ್ಲಿರುತ್ತದೆ.

ಈ) ಸುರಂಗ ಕಾಮಗಾರಿಕೆ ಈವರೆಗೆ ಒಟ್ಟಾರೆ ರೂ. 18.67 ಕೋಟಿ ಖರ್ಚಾಗಿರುತ್ತದೆ.

ಶ್ರೀ ಎಂ.ಎಸ್. ಆತ್ಮಾನಂದ :- ಮಾನ್ಯ ಅಧ್ಯಕ್ಷರೇ ವಿಸಿ ನಾಲಾ ಆಧುನೀಕರಣದ ಪುನರ್ವಿಮರ್ಶಿತ ಅಂದಾಜು 350 ಕೋಟಿ ರೂಪಾಯಿಗಳಿಗೆ ತಾಂತ್ರಿಕ ಸಲಾಹಾ ಸಮಿತಿಯ ಅನುಮೋದನೆ ದೊರಕಿದೆಯೇ? ಹಾಗೂ ಖರ್ಚಾಗಿರುವ 254 ಕೋಟಿ ರೂಪಾಯಿಗಳ ಪೈಕಿ ಮೊದಲನೇ ಭಾಗದಲ್ಲಿ ಎಷ್ಟು ಕಾಮಗಾರಿಗಳು ಆಗಿದೆ? ಎರಡನೇ ಭಾಗದಲ್ಲಿ ಎಷ್ಟಾಗಿದೆ? ಹಾಗೆಯೇ ತುಂಡು ಗುತ್ತಿಗೆ ಕಾಮಗಾರಿಗಳನ್ನು ಟೆಂಡರ್ ಮೂಲಕ ಕೈಗೆತ್ತಿಕೊಳ್ಳಲಾಗಿದೆ ಎಂದು ಮಾನ್ಯ ಸಚಿವರು ಉತ್ತರಿಸಲಿದ್ದಾರೆ, ಆ ಕಾಮಗಾರಿಗಳು ಯಾವುವು ಎಂದು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಎಚ್.ಕೆ.ಪಾಟೀಲ್:- ಮಾನ್ಯ ಅಧ್ಯಕ್ಷರೇ, ಈ ಗಾಗಲೇ ವಿಸಿ ಕೆನಾಲ್ ಆಧುನೀಕರಣಕ್ಕಾಗಿ 254 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕೆಲವನ್ನು ಪೀಸ್‌ವರ್ಕ್ ಮೂಲಕ ಟ್ಯಾಕಲ್ ಮಾಡದೇ ಇರುವಂಥದ್ದನ್ನು ಭಾಗಶಃ ಟ್ಯಾಕಲ್ ಮಾಡಿರುವುದರ ಕೆಲಸ ನಿಲ್ಲಿಸುವಂತೆ ನಾವು ಸೂಚನೆ ನೀಡಿದ್ದು ನಿಜ. ಯಾವ ಪೀಸ್‌ವರ್ಕ್‌ಗಳನ್ನು ಮೊದಲು ಕಂಟ್ರಾಕ್ಟರ್‌ಗೆ ಕೊಟ್ಟಿದ್ದರೋ ಅವುಗಳನ್ನು ಟೆಂಡರ್ ಮೂಲಕ ಮಾಡಬೇಕೆಂದು ಈಗಾಗಲೇ ನಾವು ಆದೇಶ ಕೊಟ್ಟಿದ್ದೇವೆ. ಈಗ ಟೆಂಡರ್ ಕರೆಯುವ ಕೆಲಸ ಪ್ರಾರಂಭವಾಗಿದೆ. ಮೊದಲಿನಿಂದ ಟೆಂಡರ್ ಮೇಲೆ ಯಾವ ಕೆಲಸಗಳು ಇದ್ದವೋ ಅವು ಮುಂದುವರೆದಿವೆ.

ಶ್ರೀ ಎಂ.ಎಸ್. ಆತ್ಮಾನಂದ :- ಈ ಪುನರ್ವಿಮರ್ಶಿತ ಅಂದಾಜಿಗೆ ತಾಂತ್ರಿಕ ಸಲಹಾ ಸಮಿತಿ ಅನುಮೋದನೆ ನೀಡಿದೆಯೇ? ಈ ಉಪ ಪ್ರಶ್ನೆ ಕೇಳಲು ಕಾರಣ ಇಷ್ಟೇ, ನಮ್ಮ ವಿಸಿ ನಾಲಾ ಆಧುನೀಕರಣದ ಕಾಮಗಾರಿ ಪ್ರಗತಿಯಲ್ಲಿಲ್ಲ. ಆ ತಾಂತ್ರಿಕ ಸಲಹಾ ಸಮಿತಿ ಅನುಮೋದನೆ ನೀಡಿದ ಕೆಲಸ ಬಹುತೇಕ ಸ್ಥಗಿತವಾಗಿದೆ. ವಿಸಿ ನಾಲಾ ಆಧುನೀಕರಣ ಅಲ್ಲಿರುವ ರೈತರ ಪ್ರಶ್ನೆಯಾಗಿದೆ. ಆದ್ದರಿಂದ ತಾಂತ್ರಿಕ ಸಲಹಾ ಸಮಿತಿಯ 350 ಕೋಟಿ ರೂಪಾಯಿಗಳ ಪುನರ್ ವಿಮರ್ಶಿತ ಅಂದಾಜು ಮೊಬಲಗನ್ನು ಅನುಮೋದನೆ ಮಾಡಲು ಇಷ್ಟೊಂದು ತಡವಾಗಲಿಕ್ಕೆ ಕಾರಣವೇನು? ಅಥವಾ ಆ ಸಮಿತಿ ಅನುಮೋದನೆ ಕೊಡಲಿಕ್ಕೆ ಏನಾದರೂ ವಿಶೇಷ ಕಾರಣವಿದೆಯೇ ಎಂದು ನಾನಾದರೂ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಅಧ್ಯಕ್ಷರೇ, 350 ಕೋಟಿ ರೂಪಾಯಿಗಳಿಗೆ ತಾಂತ್ರಿಕ ಸಲಹಾ ಸಮಿತಿಯ ಒಪ್ಪಿಗೆ ಸಿಕ್ಕಿದೆಯೇ ಎನ್ನುವುದರ ಬಗ್ಗೆ ತಾವು ಕೇಳುತ್ತಿದ್ದೀರಿ.

ಶ್ರೀ ಎಂ. ಎಸ್. ಆತ್ಮಾನಂದ:- ಈ ಪುನರ್ ವಿಮರ್ಶಿತ ಅಂದಾಜು 350 ಕೋಟಿ ರೂಪಾಯಿಗಳಿಗೆ ತಾಂತ್ರಿಕ ಸಲಹಾ ಸಮಿತಿ ಇನ್ನೂ ಕೂಡ ಅನುಮೋದನೆಯನ್ನು ನೀಡಿಲ್ಲ. ಕಳೆದ ಐದಾರು ತಿಂಗಳುಗಳಿಂದಲೂ ಇದು ನೆನೆಗುದಿಗೆ ಬಿದ್ದಿದೆ. ಇದಕ್ಕೆ ತಾಂತ್ರಿಕ ಸಲಹಾ ಸಮಿತಿಯು ಯಾವಾಗ ಅನುಮೋದನೆಯನ್ನು ಕೊಡುತ್ತದೆ? ಇದು ತಡವಾಗುವುದಕ್ಕೆ ಕಾರಣವೇನು?

ಶ್ರೀ ಹೆಚ್.ಕೆ. ಪಾಟೀಲ್ :- ಈಗಾಗಲೇ ತಾವೇ ವ್ಯಕ್ತಮಾಡಿದ ಹಾಗೆ ಈ 350 ಕೋಟಿ ರೂಪಾಯಿಗಳ ಮನರ್ ವಿಮರ್ಶಿತ ಅಂದಾಜು ಏನಿದೆ, ಆ ಅಂದಾಜಿಗೆ ಟಿ ಎ ಸಿ ಯವರು ತಮ್ಮ ಒಪ್ಪಿಗೆಯನ್ನು ಕೊಟ್ಟಿಲ್ಲ. ಇಷ್ಟರಲ್ಲೇ 15-20 ದಿವಸಗಳಲ್ಲಿ ಟಿ ಎ ಸಿ ಯವರು ಈ ಒಂದು ಪುನರ್ ವಿಮರ್ಶಿತ ಅಂದಾಜನ್ನು ಮಂಡಿಸುತ್ತಾರೆ.

ಶ್ರೀ ಎಂ.ಎಸ್. ಆತ್ಮಾನಂದ :- ಮಾನ್ಯ ಅಧ್ಯಕ್ಷರೇ, ಇದು ನಾಲ್ಕೈದು ತಿಂಗಳುಗಳಿಂದಲೂ ನೆನೆಗುದಿಗೆ ಬಿದ್ದಿದೆ. ಇದಕ್ಕಾಗಿ ಒಂದು ಉಪಸಮಿತಿಯನ್ನು ನೇಮಕ ಮಾಡಿ, ಅವರು ಬಂದು ನಮ್ಮ ಕಾಮಗಾರಿಗಳನ್ನು ಪರಿಶೀಲಿಸಿ ಇದಕ್ಕೆ ಯಾವುದು ಎಸೆನ್ಷಿಯಲ್ ವರ್ಕ್ಸ್ ನಾನ್ ಎಸೆನ್ಷಿಯಲ್ ವರ್ಕ್ಸ್ ಯಾವುದು ಎಂದು ಗುರುತು ಹಚ್ಚಿದ ನಂತರ ನಮಗೆ ಅನುಮೋದನೆಯನ್ನು ಕೊಡುತ್ತೇವೆಂದು ಅವರು ಹೇಳಿದ್ದಾರೆ. ಕಳೆದ ಒಂದು ವರ್ಷದಿಂದಲೂ ಯಾವುದೇ ಕಾಮಗಾರಿಗಳು ನೀರಾವರಿ ಇಲಾಖೆಯಿಂದ ಆಗಿಲ್ಲ. ಆದಷ್ಟು ಬೇಗ ತಾಂತ್ರಿಕ ಸಲಹಾ ಸಮಿತಿಯಿಂದ ಪುನರ್ ವಿಮರ್ಶಿತ ಅಂದಾಜಿಗೆ ಅನುಮೋದನೆ ದೊರಕಿಸಿ ಕೊಡುತ್ತಾರೆಯೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್:- ಮಾನ್ಯ ಅಧ್ಯಕ್ಷರೇ, ಟಿ ಎಸಿ-ಯವರಿಗೆ ಇನ್ನು 15 ದಿವಸಗಳ ಮೀಟ್ ಮಾಡಬೇಕೆಂದು ಹೇಳಿ ನಾವು ಸೂಚನೆಯನ್ನು ಕೊಡುತ್ತೇವೆ.

ಈ ಪುನರ್ ವಿಮರ್ಶಿತ ಅಂದಾಜನ್ನು ಸಹಿತ ಪರಿಶೀಲನೆ ಮಾಡಿ ಇದರ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳಿ ಸೂಚನೆಯನ್ನು ಕೊಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಅಧ್ಯಕ್ಷರೆ ಸಂಪರ್ಕನಾಲೆಯ ಸುರಂಗ ನಿರ್ಮಾಣ ಕಾರ್ಯ ಬಹುತೇಕ ಮುಗಿದಿದ್ದು ಇದಕ್ಕಾಗಿ ಸುಮಾರು 18.67 ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು ಅವರು ಹೇಳಿದ್ದಾರೆ. ಪ್ರಾರಂಭಿಕ ಅಂದಾಜಿಗೂ ಮತ್ತು ಈ ಗಿನ ಅಂದಾಜಿಗೂ ಒಂದೂವರೆ ಪಟ್ಟು ಹೆಚ್ಚಾಗಿರತಕ್ಕಂಥಾದ್ದು ಇದೆ. ಇದಕ್ಕೆ ಕಾರಣವೇನು? ಮತ್ತು ಎಸಿ ನಾಲಾ ಆಧುನೀಕರಣ ಕಾಮಗಾರಿಯ ಬಗ್ಗೆ ಅಕ್ರಮವಾಗಿದೆ ಎಂದು ಏನು ಹೇಳುತ್ತಾರೆ, ಅಲ್ಲಿ ಕೈಗೊಂಡಿರುವ ಕಾಮಗಾರಿ ಕೂಡ ಸರಿಯಾಗಿ ಅನುಷ್ಠಾನವಾಗಿಲ್ಲ, ಅದರ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಆ ತನಿಖೆ ಯಾವ ಹಂತದಲ್ಲಿದೆ? ಅದು ಪ್ರಗತಿಯಲ್ಲಿದೆಯೋ ಹೇಗೆ ಎಂದು ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್ :- ಮಾನ್ಯ ಅಧ್ಯಕ್ಷರೇ, ಈ ಲಿಂಕ್ ಕೆನಾಲ್ ಟನಲ್ ನಿರ್ಮಾಣ ಮಾಡುವುದರಲ್ಲಿ ಅವ್ಯವಹಾರ ಆಗಿದೆ ಎಂದು ಬಹಳಷ್ಟು ದೂರುಗಳು ಸರ್ಕಾರಕ್ಕೆ ಬಂದಿದ್ದವು. ಆ ದೂರುಗಳ ಹಿನ್ನೆಲೆಯಲ್ಲಿ ನಾವು ಈಗಾಗಲೇ ತನಿಖೆಗೆ ಆದೇಶ ಮಾಡಿದ್ದೇವೆ. ಅವರು ನಮಗೆ ಇಂಟರ್‌ನಲ್ ರಿಪೋರ್ಟನ್ನು ಸಹಿತ ಕೊಟ್ಟಿದ್ದರು. ಆ ಇಂಟೀರಿಯರ್ ರಿಪೋರ್ಟ್ ಮೇಲೆ ಅಲ್ಲಿ ಸರ್ಕಾರದ ಪರವಾನಗೆ ಇಲ್ಲದೇ 7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ನಮ್ಮ ಗಮನಕ್ಕೆ ಬಂದಮೇಲೆ ಸಂಬಂಧ ಪಟ್ಟ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರನ್ನು ನಾವು ಈಗಾಗಲೇ ಸಸ್ಪೆಂಡ್ ಮಾಡಿದ್ದೇವೆ. ಹಾಗೂ ಈ ಬಗ್ಗೆ ತನಿಖೆ ಮುಂದುವರೆದಿದೆ.

ಭಾಲ್ಕಿ ತಾಲ್ಲೂಕಿನ ಕುಂಟೆ ಸಿರಸಿ ಗ್ರಾಮದಲ್ಲಿ ನಡೆದ ಬಾಲಕನ ಭೀಕರ ಹತ್ಯೆ ಬಗ್ಗೆ

396(3579) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) :- ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ ?

1. ಭಾಲ್ಕಿ ತಾಲ್ಲೂಕಿನ ಕುಂಟೆ ಸಿರಸಿ ಗ್ರಾಮದ ಬಾಲಕನೊಬ್ಬನನ್ನು ಎರಡು ತಿಂಗಳ ಹಿಂದೆ ಭಾಲ್ಕಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಹಾಡು ಹಗಲಲ್ಲೇ ಭೀಕರವಾಗಿ ಹತ್ಯೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಅ) ಹಾಗಿದ್ದಲ್ಲಿ ಈ ಹತ್ಯೆಯ ಸಂಬಂಧವಾಗಿ ಎಷ್ಟು ಜನರ ಮೇಲೆ ದೂರನ್ನು ದಾಖಲೆ ಮಾಡಿಕೊಳ್ಳಲಾಯಿತು,

ಆ) ಈ ಹತ್ಯೆ ನಡೆದ ನಂತರ ಅಪರಾಧಿಯನ್ನು ಪೊಲೀಸರು ಗುರುತಿಸಿದ್ದು ಅಪರಾಧಿಯು ರಾಜಾರೋಷವಾಗಿ ಓಡಾಡುತ್ತಿದ್ದರೂ ಇದುವರೆವಿಗೂ ಅಪರಾಧಿಯನ್ನು ಬಂಧಿಸದೇ ಇರಲು ಕಾರಣವೇನು? ಪೊಲೀಸ್ ಇಲಾಖೆಯ ಕೆಲವು ಅಧಿಕಾರಿಗಳು ಅಪರಾಧಿಗೆ ಸಹಾಯ ಮಾಡುತ್ತಿರುವುದರಿಂದ ಈ ಬಂಧನ ಸಾಧ್ಯವಾಗದೇ ಇರುವುದು ನಿಜವಲ್ಲವೆ?

ಇ) ಇಲ್ಲದಿದ್ದಲ್ಲಿ ಅಪರಾಧಿಯನ್ನು ಕೂಡಲೇ ಬಂಧಿಸಿ ಈ ಪ್ರಕರಣವನ್ನು ಸಮಗ್ರವಾಗಿ ತನಿಖೆ ನಡೆಸಲು ಸಿ.ಓ.ಡಿ.ಗೆ ಒಪ್ಪಿಸಲಾಗುವುದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :-

1. ಹೌದು

ಅ) ಈ ಸಂಬಂಧದಲ್ಲಿ ಬಾಲ್ಕಿ ನಗರ ಪೊಲೀಸ್ ಠಾಣೆಯ ಅಪರಾದ ಸಂಖ್ಯೆ 87:2000 ಕಲಂ302 ಐಪಿಸಿ ಪ್ರಕಾರ ತನಿಖೆ ಕೈಗೊಳ್ಳಲಾಗಿದೆ. ತನಿಖೆಯಿಂದ (1) ಭೀಮಶ್ಯ (2) ಚಂದ್ರಕಾಂತ ಇವರುಗಳು ಈ ಅಪರಾಧವನ್ನು ಎಸಗಿದ್ದಾರೆ ಎಂದು ಕಂಡು ಬಂದಿದೆ.

ಆ) ಕೊಲೆಗೆ ಸಂಬಂಧಿಸಿದ ಇಬ್ಬರು ಆರೋಪಿತರ ಪೈಕಿ ಒಬ್ಬರಾದ ಚಂದ್ರಕಾಂತ ಉರ್ಫ್ ಚಂದ್ರು ಈತನನ್ನು ದಿನಾಂಕ 1-8-2000 ಬಂಧಿಸಲಾಗಿದೆ. ಇನ್ನೊಬ್ಬ ಆರೋಪಿ ಭೀಮಶ್ಯ ಈತನು ಕೃತ್ಯವೆಸಗಿದ ದಿನಾಂಕದಿಂ ತಲೆ ಮರೆಸಿಕೊಂಡಿದ್ದು ಆತನ ಪತ್ತೆಗಾಗಿ ಶೋಧನೆ ನಡೆಸಲಾಗಿದೆ. ಕೊಲೆಗೆ ಸಂಬಂಧಿಸಿದ ಅಪರಾಧಿ ರಾಜಾರೋಷವಾಗಿ ಅಡ್ಡಾಡುತ್ತಿದ್ದಾನೆ, ಕೆಲವು ಪೊಲೀಸ್ ಅಧಿಕಾರಿಗಳು ಆತನಿಗೆ ಸಹಾಯ ಮಾಡುತ್ತಿದ್ದಾರೆಂಬ ವಿಷಯ ಸತ್ಯಕ್ಕೆ ದೂರವಾಗಿದೆ.